**ಸಾಕ್ಷಿಗೆ ದಿನಾಂಕ:28-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. SNR ವಕೀಲರಿಂದ ::**

ನಿಪಿ15 ದಾಖಲಾತಿಯನ್ನು ನಮ್ಮ ನಿವೇಶನದ ಮುಂದೆ ಇರುವ ಪುಟ್ಟಪ್ಪ ರವರ ನಿವೇಶನ 30 x 40 ಅಡಿ ಇರುವುದನ್ನು ತೋರಿಸಲು ಹಾಜರುಪಡಿಸಿರುತ್ತೇನೆ. ನಿಪಿ15 ರಲ್ಲಿ ನಮ್ಮ ಜಾಗದ ವಿಸ್ತೀರ್ಣ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ15 ರಂತಹ ನಮ್ಮ ಜಾಗಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆ ಹಾಜರುಪಡಿಸದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನನ್ನ ಮಾರಾಟಗಾರರ ಬಳಿ ಎಷ್ಟು ವಿಸ್ತೀರ್ಣದ ಸ್ವತ್ತು ಇತ್ತು ಎಂದು ಎಲ್ಲೂ ಕಾಣುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಪುಟ್ಟಪ್ಪ ರವರ 30 x 40 ಅಡಿಗಳ ನಿವೇಶನದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಕ್ರಯಪತ್ರಗಳಲ್ಲಿ ನನ್ನ ಸ್ವತ್ತಿನ ಪೂರ್ವಕ್ಕೆ ಪುಟ್ಟಪ್ಪ ರವರ ಮನೆ ಇರುವುದಾಗಿ ಕಂಡು ಬರುತ್ತದೆ. ಪುಟ್ಟಪ್ಪನ ಮನೆಯ ಪೂರ್ವಕ್ಕೆ ಸರ್ಕಾರಿ ರಸ್ತೆ ಇರುತ್ತದೆ. ನಿಪಿ 17 ಕ್ರಯಪತ್ರದ ಸ್ವತ್ತಿನ ಪೂರ್ವಕ್ಕೆ ಬೊಮ್ಮನಹಳ್ಳಿ ಮಹಾಲಿಂಗಪ್ಪ ರವರ ವಾಸದ ಮನೆ ಹಾಗೂ ಕಾಂಪೌಂಡ್ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಕ್ರಯಪತ್ರಗಳಲ್ಲಿ ಸ್ವತ್ತಿನ ಪೂರ್ವಕ್ಕೆ ಬೊಮ್ಮನಹಳ್ಳಿ ಮಹಾಲಿಂಗಪ್ಪ ರವರ ವಾಸದ ಮನೆ ಹಾಗೂ ಕಾಂಪೌಂಡ್ ಇರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯ ಕೇವಲ ಒಂದು ಕ್ರಯುಪತ್ರದಲ್ಲಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ತಪ್ಪಾಗಿರುವ ವಿಚಾರದ ವಿವರಣೆಗೆ ನಾನು ಇತರೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ಕ್ರಯಪತ್ರಗಳಲ್ಲಿ ಸ್ವತ್ತಿನ ಪಶ್ಚಿಮಕ್ಕೆ conservancy ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಎಲ್ಲಾ ಕ್ರಯಪತ್ರಗಳಲ್ಲಿ ಸ್ವತ್ತಿನ ಉತ್ತರಕ್ಕೆ ಅಸ್ತರ್ ಅಹಮದ್ ಎನ್ನುವವರ ಸ್ವತ್ತು ಇರುವುದಾಗಿ ಕಂಡು ಬರುತ್ತದೆ. ನಾನು ಹಾಜರುಪಡಿಸಿರುವ ಎಲ್ಲಾ ಕ್ರಯಪತ್ರಗಳಲ್ಲಿ ಸ್ವತ್ತಿನ ದಕ್ಷಿಣಕ್ಕೆ

ರಾಜೇಂದ್ರ ಮೊದಲಿಯರ್ ಎನ್ನುವವರ ಸ್ವತ್ತು ಇರುವುದಾಗಿ ಕಂಡು ಬರುತ್ತದೆ. ನನ್ನ ಸ್ವತ್ತಿನ ಉತ್ತರಕ್ಕೆ ಸುಮ್ಮತಿ ರವರ ಸ್ವತ್ತು ಇರುತ್ತದೆ ಎಂದರೆ ಸರಿ. ಸುಮ್ಮತಿ ರವರು ಅವರ ಸ್ವತ್ತನ್ನು ಡಾಃ ಈಶ್ವರಪ್ಪ ಎನ್ನುವವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನನ್ನ ಸ್ವತ್ತಿನ ಉತ್ತರಕ್ಕೆ ಸುಮ್ಮತಿ ರವರ ಸ್ವತ್ತು ಇರುವುದಾಗಿ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ನನ್ನ ಸ್ವತ್ತನ್ನು ಖರೀದಿ ಮಾಡಿದ ನಂತರದಲ್ಲಿ ಸುಮ್ಮತಿ ರವರು ಅವರ ಸ್ವತ್ತನ್ನು ಖರೀದಿ ಮಾಡಿರುವ ಕಾರಣ ಕಂಡು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಗಳಲ್ಲಿ ನನ್ನ ದಾವೆಯಲ್ಲಿ ತೋರಿಸಿರುವ ಸ್ವತ್ತಿನ ವಿಸ್ತೀರ್ಣ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ14 ರಲ್ಲಿ ನಿವೇಶನದ ಅಳತೆ ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ14ರ ಪ್ರಕಾರ ನಿವೇಶನದ ವಿಸ್ತೀರ್ಣ 328.50508 ಚದರಿ ಮೀಟರ್ ಎಂದು ಕಂಡು ಬರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಯಲ್ಲೂ ನಾನು ದಾವೆಯಲ್ಲಿ ಹೇಳಿರುವ ಸ್ವತ್ತಿನ ವಿಸ್ತೀರ್ಣ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: